ಆರ್.ಡಬ್ಲ್ಯೂ. 1

ದಿನಾಂಕಃ 10.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ. ಆರ್.ಎನ್. ವಕೀಲರಿಂದ**

ಅರ್ಜಿದಾರ ನಮ್ಮ ಸಂಸ್ಥೆಯಿಂದ ಪಡೆದ ಪರಿಹಾರ ಮೊತ್ತ ಅಂತಿಮ ಪರಿಹಾರದ ಮೊತ್ತವಾಗಿರುತ್ತದೆ ಎನ್ನುವ ಯಾವುದೇ ದಾಖಲೆಯನ್ನು ಬರೆದು ನೀಡಿರುವುದಿಲ್ಲ ಎಂದರೆ ಸರಿ. ನಿ.ಆರ್.2 ಜಿಲ್ಲಾಧಿಕಾರಿಯವರ ಆದೇಶಕ್ಕೆ ಅರ್ಜಿದಾರ ತಾನು ಬದ್ದನಾಗಿದ್ದೇನೆ ಎನ್ನುವ ಯಾವುದೇ ದಾಖಲೆಯನ್ನು ಸಹ ನಮಗೆ ಬರೆದು ನೀಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ನಮ್ಮ ಸಂಸ್ಥೆ ರೂ.5,34,490/ ರೂಪಾಯಿ ಹಣವನ್ನು ನೀಡಿರುವುದಿಲ್ಲ ಆದರೂ ಸಹ ನಾವು ಸದರಿ ಮೊತ್ತವನ್ನು ನೀಡಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ನಾವು ಕೇವಲ ರೂ.3,84,490/ ರೂಪಾಯಿ ಹಣವನ್ನು ಮಾತ್ರ ನಾವು ಪಾವತಿಸಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರನ ಒಂದು ಬೇವಿನ ಮರಕ್ಕೆ 10 ಸಾವಿರ ರೂಪಾಯಿ ಪರಿಹಾರ ಮೊತ್ತವನ್ನು ನಾವು ನೀಡಿದ್ದೇವೆ. ಅರ್ಜಿದಾರ ಜಮೀನಿನಲ್ಲಿ 2 ಬೇವಿನ ಮರಗಳು ಇದ್ದರೂ ಸಹ ನಾವು ಕೇವಲ ಒಂದು ಬೇವಿನ ಮರಕ್ಕೆ ಮಾತ್ರ ಪರಿಹಾರ ಮೊತ್ತ ನೀಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರನ ಜಮೀನಿನಲ್ಲಿ ಇದ್ದ 2 ಹೊಂಗೆ ಮರಗಳನ್ನು ಸಹ ನಾವು ಕಡಿದಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರನ ಜಮೀನಿನಲ್ಲಿ ಬೆಳೆದ ತೊಗರಿ ಬೆಳೆಗೆ ನಾವು ರೂ.19,000/ ಪರಿಹಾರ ಮೊತ್ತ ನೀಡಿದ್ದೇವೆ. ಅರ್ಜಿದಾರ ಜಮೀನಿನ 13 ಗುಂಟೆಯಲ್ಲಿ ಸದರಿ ತೊಗರಿ ಬೇಳೆ ಬೆಳೆಯಲಾಗಿತ್ತು.

ಆರ್.ಡಬ್ಲ್ಯೂ. 1

ಅರ್ಜಿದಾರನ ಜಮೀನಿನಲ್ಲಿ ಬೆಳೆದ ಬೆಳೆಯ ವಿಸ್ತೀರ್ಣಕ್ಕೆ ಅನುಗುಣವಾಗಿ ಸದರಿ ಪರಿಹಾರ ಮೊತ್ತವನ್ನು ನಾವು ನೀಡಿದ್ದೇವೆ. ಪ್ರತಿಯೊಂದು ಎಕರೆ ಜಮೀನಿನಲ್ಲಿ ಎಷ್ಟು ತೊಗರಿ ಬೆಳೆ ಬೆಳೆಯಲಾಗುತ್ತದೆ ಎನ್ನುವ ಆಧಾರದ ಮೇಲೆ ನಾವು ಪರಿಹಾರದ ಮೊತ್ತವನ್ನು ನೀಡಿರುವುದಿಲ್ಲ. ಸದರಿ ರೂ.19,000/ ಹಣವನ್ನು ಸರ್ಕಾರದ ಯಾವುದೇ ಆದೇಶದ ಪ್ರಕಾರ ನಾವು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರೂ. 19,000/ ಹಣವನ್ನು ನಾವು ಸರ್ಕಾರದ ಗೈಡ್ ಲೈನ್ಸ್ ಪ್ರಕಾರ ನೀಡಿದ್ದೇವೆ. ಸದರಿ ಸರ್ಕಾರದ ಗೈಡ್ ಲೈನ್ಸ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಅರಣ್ಯ ಇಲಾಖೆಯ ಗೈಡ್ ಲೈನ್ಸ್ ಪ್ರಕಾರ ಒಂದು ಬೇವಿನ ಮರಕ್ಕೆ ರೂ.10,000/ ಹಣವನ್ನು ನಾವು ಪರಿಹಾರವಾಗಿ ನೀಡಿದ್ದೇವೆ. ಸದರಿ ಬೇವಿನ ಮರದ ಗಾತ್ರವನ್ನು ನಾವು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಬೇವಿನ ಮರದ ವಯಸ್ಸಿನ ಆಧಾರದ ಮೇರೆಗೆ ಸದರಿ ಬೇವಿನ ಮರದ ಪರಿಹಾರವನ್ನು ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಬೇವಿನ ಮರದ ವಯಸ್ಸನ್ನು ನಾವು ಸಂಬಂಧಪಟ್ಟ ವಿಶೇಷ ಅಧಿಕಾರಿಯಿಂದ ಪ್ರಮಾಣಿಕರಿಸಿರುವುದಿಲ್ಲ ಎಂದರೆ ಸರಿ. ಅರ್ಜಿದಾರರ 13 ಗುಂಟೆ ಜಮೀನಿನಲ್ಲಿ ನಮ್ಮ ಕಾರಿಡಾರ್ ಅವರಿಸಿಕೊಂಡಿದೆ. ಸದರಿ ಕಾರಡಾರ್ ನ ಉದ್ದ 32 ಮೀಟರ್ ಮತ್ತು ಅಗಲ 33 ಮೀಟರ್ ಆಗಿದೆ. ಸದರಿ ಕಾರಿಡಾರ್ ನ ಅಗಲ 33 ಮೀಟರ್ ಆಗಿದೆ ಎನ್ನುವ ಬಗ್ಗೆ ನಾವು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಬಲ್ಲೆ. ಸೆಂಟ್ರಲ್ ಗೌರ್ನಮೆಂಟ್ ನ ಗೈಡ್ ಲೈನ್ಸ್ ಪ್ರಕಾರ ಕಾರಿಡಾರ್

ನ ಅಗಲ 67 ಮೀಟರ್ ಆಗಿರುತ್ತದೆ ಎಂದರೆ ಸರಿಯಲ್ಲ. ಸೆಂಟ್ರಲ್ ಗೌರ್ನಮೆಂಟ್ ನ ಗೈಡ್ ಲೈನ್ಸ್ ಪ್ರಕಾರ ಕಾರಿಡಾರ್ ನ ಅಗಲ 67 ಮೀಟರ್ ಆಗಿದ್ದರೂ ಸಹ ನಾವು 34x32 ಮೀಟರ್ ವಿಸ್ತೀರ್ಣವನ್ನು ಬಿಟ್ಟು ಅರ್ಜಿದಾರರಿಗೆ ಪರಿಹಾರ ಮೊತ್ತವನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ವಾಸ್ತವಿಕವಾಗಿ ಅರ್ಜಿದಾರರ ಜಮೀನಿನಲ್ಲಿ 33x32 ಮೀಟರ್ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಸದರಿ ಕಾರಿಡಾರ್ ಇದ್ದರೂ ಸಹ ನಾವು ಕಡಿಮೆ ವಿಸ್ತೀರ್ಣವನ್ನು ನಮೂದಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಕಾರಡಾರ್ ಗೋಸ್ಕರ ಅರ್ಜಿದಾರರಿಗೆ ನಾವು ರೂ.70,490/ ಪರಿಹಾರವನ್ನು ನೀಡಿದ್ದೇವೆ. ಅರ್ಜಿದಾರನ ಜಮೀನಿನಲ್ಲಿ ನಾವು ಟವರ್ ಹಾಕಿದ್ದೇವೆ. ಸದರಿ ಟವರ್ 'S' ಟೈಪ್ ಆಗಿದೆ. ಸದರಿ ಟವರ್ ಗೋಸ್ಕರ ಅರ್ಜಿದಾರರಿಗೆ ನಾವು ರೂ.3,75,000/ ಪರಿಹಾರವನ್ನು ನೀಡಿದ್ದೇವೆ. 'S' ಟೈಪ್ ಮತ್ತು 'DS' ಟೈಪ್ ಟವರ್ ಗಳು ಒಂದೇ ಆಗಿರುತ್ತವೆ. 'DS' ಟೈಪ್ ಮತ್ತು 'DA' ಟೈಪ್ ಟವರ್ ಗಳು ಒಂದೇ ಆಗಿರುವುದಿಲ್ಲ , ಅವು ಬೇರೆ ಬೇರೆ ಆಗಿರುತ್ತವೆ. ಅರ್ಜಿದಾರರಿಗೆ ನಾವು ನೀಡಿರುವ ನಿ.ಪಿ.1 ರ ನೋಟೀಸಿನಲ್ಲಿ 'DA' ಟೈಪ್ ಟವರ್ ಆಗಿದೆ ಎಂದು ನಮೂದಿಸಿದ್ದೇವೆ ಎಂದು ಕೇಳಿದ ಪ್ರಶ್ನೆಗೆ ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್.3 ರ ದಾಖಲೆಯಲ್ಲಿ 'DA' category ಎಂದು ಬರೆದದ್ದದನ್ನು strike out ಮಾಡಿ 'DS' type ಎಂದು ಬರೆದಿದ್ದೇವೆ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್.5 ರ ದಾಖಲೆಯ ರಶೀಧಿ ನಂಬರ್ 1660 ರ ದಾಖಲೆಯಲ್ಲಿ 'DA' type tower ಎಂದು ಬರೆದಿದ್ದೇವೆ ಎಂದರೆ ಸರಿ. 'DA' type tower ಗೆ ನಾವು ರೂ. 3,50,000/ ಪರಿಹಾರವನ್ನು ನೀಡುತ್ತೇವೆ. DA type ಟವರ್ ಗಿಂತ DS type ಟವರ್ ದೊಡ್ಡದಾಗಿರುತ್ತದೆ. ಸದರಿ ಅರ್ಜಿದಾರನ ಜಮೀನಿನಲ್ಲಿ ನಾವು ಹಾಕಿರುವ ಟವರ್ ನ ವಿಸ್ತೀರ್ಣ 17 x 17 ಮೀಟರ್ ಆಗಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ನಿ.ಆರ್.2 ರ ದಾಖಲೆಯಲ್ಲಿ ನಾವು ಅಳವಡಿಸಿರುವ ಟವರ್ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಆರ್.9 ರಲ್ಲಿ ಇರುವ ಎಲ್ಲಾ ಚೆಕ್ಕುಗಳನ್ನು ನಾವು ಅರ್ಜಿದಾರರಿಗೆ ನೀಡಿರುವುದಿಲ್ಲ, ಅವುಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪರಿಹಾರ ಮೊತ್ತವನ್ನು ನೀಡುವ ಸಮಯದಲ್ಲಿ ಫಲಾನುಭವಿಗಳ ಬ್ಯಾಂಕ್ ಡೀಟೇಲ್ಸ್ ಗಳನ್ನು ಪಡೆದುಕೊಂಡು ಅಕೌಂಟ್‌ಪೇಯಿ ಮುಖಾಂತರ ಸದರಿಯವರಿಗೆ ನಾವು ಪರಿಹಾರದ ಮೊತ್ತವನ್ನು ನೀಡುತ್ತೇವೆ. ನಿ.ಆರ್. 5 ರ ದಾಖಲೆಯನ್ನು ನಮ್ಮ ಅನುಕೂಲಕ್ಕೋಸ್ಕರ ನಾವು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು ನಿ.ಪಿ.2 ರ ನೋಟೀಸುಗಳನ್ನು ನಾವು ಅರ್ಜಿದಾರನ ಜಮೀನಿನಲ್ಲಿ ಲೈನು ಎಳೆಯುವ ಸಮಯದಲ್ಲಿ ನೀಡಿದ್ದೇವೆ ಎಂದರೆ ಸರಿ.

ಆರ್.ಡಬ್ಲ್ಯೂ. 1

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವುದೇ ದಾಖಲೆಗಳನ್ನು ನಾವು ಅರ್ಜಿದಾರನ ಜಮೀನಿನಲ್ಲಿ ಲೈನು ಎಳೆಯುವ ಸಮಯದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು